**ಅ.ದಾವಾ ನಂ. 91/2022** **ಪಿ.ಡಬ್ಲ್ಯೂ-1**

**ದಿನಾಂಕ 06/03/2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 5 ನೇ ಪ್ರತಿವಾದಿಗಳ ಪರವಾಗಿ ಶ್ರೀ ಹೆಚ್.ಆರ್.ಜೆ. ವಕೀಲರಿಂದ**

ನನ್ನ ಸ್ವಂತ ಊರು ಹಿರೇಬೆಳಗುಳಿ ಆಗಿರುತ್ತದೆ. ನಾನು 1953 ರಿಂದ 1976 ರವರೆಗೂ ಹಿರೇಬೆಳಗುಳಿಯಲ್ಲಿ ವಾಸವಿದ್ದೆನು. 1953 ರಿಂದ 1976 ನೇ ಇಸವಿಯವರೆಗೂ ಹಿರೇಬೆಳಗುಳಿಯಲ್ಲಿ ನಾನು ವಾಸ ಇದ್ದೆ ಎಂದು ಸೂಚಿಸಲು ಯಾವುದೇ ವಾಸ ದೃಢೀಕರಣ ಪತ್ರ ಹಾಜರುಪಡಿಸಿಲ್ಲ ನನ್ನ ಜನನದಿಂದಲೂ ನನ್ನ ತಂದೆ ಶಿಕ್ಷಕ ವೃತ್ತಿ ಮಾಡುತ್ತಿದ್ದರು ಎಂದರೆ ಸರಿ. ನನ್ನ ತಂದೆಗೆ 5 ಮಂದಿ ಅಣ್ಣತಮ್ಮಂದಿರು ಇಬ್ಬರು ಅಕ್ಕತಂಗಿಯರು ಇದ್ದರು. ನಿಮ್ಮ ತಂದೆಯವರು ಶಿಕ್ಷಕರಾಗಿದ್ದ ಕಾರಣ ಊರಿನಿಂದ ಊರಿಗೆ ವರ್ಗಾವಣೆ ಆಗುತ್ತಿದ್ದ ಕಾರಣ ನಿಮ್ಮನ್ನು ಹಿರೇಬೆಳಗುಳಿಯಲ್ಲಿ ಇರಲು ಬಿಡದೇ ನಿಮ್ಮ ತಂದೆಯ ಅಣ್ಣತಮ್ಮಂದಿರು ಮತ್ತು ಅಕ್ಕತಂಗಿಯರೇ ಹಿರೇಬೆಳಗುಳಿಯಲ್ಲಿ ವಾಸ ಇದ್ದರು ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ 2 ವರ್ಷಗಳ ಕಾಲ ಮಾತ್ರ ನನ್ನ ತಂದೆ ಹೊಳೆನರಸೀಪುರ ನಗರದಲ್ಲಿದ್ದು ಮಿಕ್ಕಾ ಕಾಲಾವಧಿ ಹಿರೇಬೆಳಗುಳಿಯಲ್ಲಿಯೇ ನನ್ನ ತಂದೆ ಇದ್ದರು. 2 ವರ್ಷಗಳ ಕಾಲ ನನ್ನ ತಂದೆಯಿಂದ ನಾನು ಬೇರೆ ವಾಸವಿದ್ದೆನು ಎಂದರೆ ಸರಿಯಲ್ಲ.

2. ಪ್ರತಿವಾದಿಗಳ ಮಾತ್ರ ದಾವಾ ಸ್ವತ್ತುಗಳ ಜಂಟಿ ಸ್ವಾಧೀನದಲ್ಲಿದ್ದು ಅವರೇ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಂದೆ ಆಗಸ್ಟ್ 2005 ರಲ್ಲಿ ಮೃತಪಟ್ಟಿರುತ್ತಾರೆ. ನನ್ನ ತಂದೆಯ ಮರಣ ಪ್ರಮಾಣ ಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನೆ. ನಿಮ್ಮ ತಂದೆಯ ಮರಣಾನಂತರದ ಕ್ರಿಯೆಗಳನ್ನು ನೀವು ಮುಂದಾಳತ್ವ ವಹಿಸಿ ಮಾಡಿದ್ದೀರೇ ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ನಾನು ನನ್ನ ತಮ್ಮ ಪ್ರಕಾಶ ಜಂಟಿಯಾಗಿ ಮಾಡಿದ್ದೇವೆ ಎಂದು. ನಿಮ್ಮ ತಂದೆ ಹೇಗೆ ಮೃತಪಟ್ಟರು ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಕಾಲು ಜಾರಿ ಹೊಳೆಯಲ್ಲಿ ಬಿದ್ದು ಮೃತಪಟ್ಟರು ಎಂದು ನನಗೆ ನಂತರ ತಿಳಿಯಿತು. ಶವ ಎಷ್ಟು ದಿನಗಳ ನಂತರ ಸಿಕ್ಕಿತ್ತೆಂದು ನೀವು ತಿಳಿದುಕೊಂಡಿರೇ

ಎಂದು ಪ್ರಶ್ನಿಸಲು ಸಾಕ್ಷಿ ಹೇಳುತ್ತಾರೆ ಶವ ಸಿಗಲೇ ಇಲ್ಲ ಎಂದು ನನಗೆ ತಿಳಿಸಿರುತ್ತಾರೆ. ಶವ ಸಿಗದೇ ಇರುವ ಕಾರಣ ನಾನಾಗಲೀ, ಪ್ರಕಾಶನಾಗಲೀ ನಮ್ಮ ತಂದೆಯ ಮರಣಾನಂತರದ ಕ್ರಿಯೆಗಳನ್ನು ಮಾಡಿಯೇ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ ಪಾರ್ಥೀವ ಶರೀರ ನನಗೆ ಸಿಗಲಿಲ್ಲ ಎಂದರೆ ಸರಿ. ನನ್ನ ತಂದೆ ಕಳುವಾಗಿದ್ದ ಬಗ್ಗೆಯಾಗಲೀ ಮೃತಪಟ್ಟ ಬಗ್ಗೆಯಾಗಲೀ ಠಾಣೆಯಲ್ಲಿ ನನಗಾಗಲೀ ನನ್ನ ಅಣ್ಣ ತಮ್ಮಂದಿರಿಗಾಗಲೀ ಫಿರ್ಯಾದು ಮಾಡಲು ತೊಂದರೆ ಇರಲಿಲ್ಲ. ನಿಮ್ಮ ತಂದೆ ಮರಣದ ಬಗ್ಗೆ ನಿಮಗೆ ಯಾವುದೇ ಮಾಹಿತಿ ಇರಲಿಲ್ಲ ಎಂದು ಸೂಚಿಸಲು ಸಾಕ್ಷಿ ಹೇಳುತ್ತಾರೆ 2 ದಿನಗಳ ಕಳೆದು ನನ್ನ ತಮ್ಮನಿಂದ ನಾನೇ ಮಾಹಿತಿಯನ್ನು ಪಡೆದಿದ್ದೇನೆ ಎಂದು. ನನ್ನ ತಂದೆಯ ಜೊತೆ ನನಗೆ ಯಾವುದೇ ಒಡನಾಟ ಇರಲಿಲ್ಲ ಎಂದರೆ ಸರಿಯಲ್ಲ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಹಾಸ್ಟೆಲ್ ನಲ್ಲಿ ನಾನು ಓದುತ್ತಿದ್ದ ಕಾರಣ ಒಡನಾಟ ಇರಲಿಲ್ಲ ಎಂದರೆ ಸರಿಯಲ್ಲ. ಸಿಂಡಿಕೇಟ್ ಬ್ಯಾಂಕಿನಲ್ಲಿ ಉದ್ಯೋಗ ಪಡೆದ ನಂತರ ನನ್ನ ತಂದೆ-ತಾಯಿಯ ಶುಶ್ರೂಷೆ ಯಾವುದೇ ರೀತಿ ನಾನು ಮಾಡಿಯೇ ಇಲ್ಲ ಹಾಗೂ ಅವರ ಅಂತ್ಯ ಕ್ರಿಯೆಗಳನ್ನು ನಾನು ಮಾಡಿಲ್ಲ ಎಂದರೆ ಸರಿಯಲ್ಲ.

ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ **ಮುಂದೂಡಲಾಯಿತು.**

ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.

ಓ.ಹೇ.ಕೇ.ಸ.ಇ.

ಸಿವಿಲ್ ಜಡ್ಜ್ ಮತ್ತು ಜೆಎಂಎಫ್‌ಸಿ.,
ಹೊಳೆನರಸೀಪುರ.